**ಓ ಎಸ್ ನಂಃ 200-17**
**ಪಿ ಡಬ್ಲ್ಯೂ ಃ 1**

**ದಿಃ 16-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್ ಎಸ್ ಎಸ್ ವಕೀಲರಿಂದ**

29. ದಾವಾ ಆಸ್ತಿಯ ವಿಸ್ತೀರ್ಣ 9 ಗುಂಟೆ ಇರುತ್ತದೆ. ದಾವಾ ಆಸ್ತಿಗೆ ಎರಡು ದಾವೆ, ಎರಡು ಕ್ರಯಪತ್ರ ಮತ್ತು ಎರಡು ಕ್ರಯದ ಕರಾರು ಪತ್ರಗಳು ಆಗಿರುತ್ತವೆ ಎಂದರೆ ಒಂದೇ ದಾವಾ ಆಸ್ತಿಗೆ ಸಂಬಂದಿಸಿದಂತೆ 2 ದಾವೆ ಇದ್ದು ಎರಡು ದಾವೆಗಳು ಏಕಪಕ್ಷೀಯವಾಗಿ ಡಿಕ್ರಿಯಾಗಿದ್ದು 2 ಕ್ರಯದ ಕರಾರು ಪತ್ರಗಳು ಆಗಿದ್ದು ಆದರೆ ಕ್ರಯಪತ್ರಗಳು ಆಗಿರುವುದಿಲ್ಲ. ನನಗೆ ಕ್ರಯಪತ್ರ ಆಗಿರುತ್ತದೆ ಆದರೆ ಪ್ರತಿವಾದಿಗೆ ಕ್ರಯಪತ್ರ ಆಗಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದಂತೆ 5 ರಿಂದ 9ನೇ ಪ್ರತಿವಾದಿಗಳ ಹೆಸರಿಗೆ ಆದ ಕ್ರಯಪತ್ರ ನ್ಯಾಯಾಲಯದ ಕಡತದಲ್ಲಿರುತ್ತದೆ ಎಂದರೆ ಇರಬಹುದು. ಎರಡು ದಾವೆಗಳಲ್ಲಿ ತೋರಿಸಿದ ದಾವಾ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕುಬಂದಿ ಒಂದೇ ಇರುತ್ತದೆ ಎಂದರೆ ನಿಜ. ಎರಡು ದಾವೆಗಳಲ್ಲಿ ಇರುವ ದಾವಾ ಆಸ್ತಿ ಒಂದೇ ಆಗಿರುತ್ತದೆ ಎಂದರೆ ನಿಜ. ದಾವಾ ಆಸ್ತಿಗೆ ಸಂಬಂದಿಸಿದಂತೆ ಆದ ಕ್ರಯದ ಕರಾರು ಪತ್ರದ ಬಗ್ಗೆ ನಾನು ನೋಟಿಸನ್ನು ಕೊಟ್ಟಿರುತ್ತೇನೆ. ಈ ದಾವೆಯನ್ನು ಹೂಡುವ ಮೊದಲು ಹೂಡಿದ ಮತ್ತೊಂದು ಸ್ಪೆಸಿಫಿಕ್ ಪರ್ಫಾಮೆನ್ಸ್ ಡಿಕ್ರಿ ನನಗೆ ಅನ್ವಯವಾಗುವುದಿಲ್ಲವೆಂದು ನಾನು ಯಾವುದೇ ಕ್ರಮತೆಗೆದುಕೊಂಡಿಲ್ಲ. ದಾವಾ ಆಸ್ತಿ 9 ಗುಂಟೆಗೆ ಸಂಬಂದಿಸಿದಂತೆ ಈ ದಾವೆ ಹೂಡುವ ಮೊದಲು ಪೋಡಿ ಆಗಿರಲಿಲ್ಲ ಎಂದರೆ ಈಗ ಪೋಡಿಗೆ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮಾರಾಟಗಾರರ ಹೆಸರಿಗೆ ಪೋಡಿಯಾಗಿತ್ತು ಎಂದು ಹೇಳುತ್ತಾರೆ. ಈ ದಾವೆಯನ್ನು ಹೂಡುವ ಕಾಲಕ್ಕೆ 9 ಗುಂಟೆ ಜಮಿನಿಗೆ ಸಂಬಂದಿಸಿದಂತೆ ಪೋಡಿಯಾಗಿರಲಿಲ್ಲ ಎಂದರೆ ಜಮೀನ್ದಾದಾರರ ಹೆಸರಿಗೆ ಪೋಡಿಯಾಗಿತ್ತು ಎಂದು ಹೇಳುತ್ತಾರೆ. ಜೋಡಿದಾರರಿಗೆ ಸಂಬಂದಸಿದಂತೆ 9 ಗುಂಟೆಗೆ ಪೋಡಿಯಾಗಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.